## ಹುಲುಸು ಬೆಳೆಗೆ ಅಜೋಲ

ಕೆಸರುಗದ್ದೆಗೆ ಭತ್ತ ನಾಟಿ ಮಾಡಿದ ಮೇಲೆ ಅಜೋಲದ ಬೀಜಕಣ (Sporse) ಗಳನ್ನು ಗದ್ದೆಯ ನೀರಿನೊಂದಿಗೆ ಹರಿಸಿದರೆ ಇಡೀ ನೆಲವೇ ಕೆಲವು ದಿನಗಳಲ್ಲಿ ಹಸಿರ ಪತ್ತಲ ಹಾಸಿದಂತೆ ಕಾಣುತ್ತದೆ. ಇದಕ್ಕೆ ಕಾರಣ ಅಜೋಲವೆಂಬ ಹಸಿರು ಸೂಕ್ಷ್ಮ ಪಾಚಿ. ಇದು ಸಾರಜನಕವನ್ನು ಹೀರುವ ಸಸ್ಯ. ವಾತಾವರಣದಿಂದ ನೇರವಾಗಿ ಸಸ್ಯಗಳಿಗೆ ಸಾರಜನಕ ಒದಗಿಸುವುದು ಈ ಸಹಜ ಗುಣದಿಂದ ಭತ್ತದ ಪೈರು ಹುಲುಸಾಗಿ ಬೆಳೆಯುತ್ತದೆ. ರಾಸಾಯನಿಕ ಗೊಬ್ಬರಗಳಿಗಿಂತ ಇತ್ತೀಚೆಗೆ ಇದನ್ನು ಹೆಚ್ಚಾಗಿ ಒಳ ಸುರಿಯಂತೆ ಬಳಸುತ್ತಿದ್ದಾರೆ. ಸಹಜ ಸಾವಯವ ಗೊಬ್ಬರ ಒದಗಿಸುವುದರಿಂದ ರೈತರಿಗೆ ವರದಾನವಾಗಿದೆ. ಕೃಷಿ ವಿಜ್ಞಾನಿಗಳೂ ಇದನ್ನೇ ಶಿಫಾರಸು ಮಾಡುವುದರಿಂದ ಹೆಚ್ಚಿನ ಇಳುವರಿಗೆ, ರಾಸಾಯನಿಕರಹಿತ ಧಾನ್ಯಕ್ಕೆ, ಆ ಮೂಲಕ ಜನರ ಆರೋಗ್ಯಕ್ಕೆ ಈ ಸಸ್ಯ ಪ್ರತ್ಯಕ್ಷವಾಗಿಯೆ ನೆರವಾಗುತ್ತಿದೆ.

**-ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**





## ಸೊಂಟದ ಕೊಕ್ಕೆ...!

ಮಲೆನಾಡಿನ ಹಳ್ಳಿಗಳಲ್ಲಿ ತೋಟ, ಗದ್ದೆಗಳಲ್ಲಿ ಕೆಲಸ ಮಾಡುವವರು, ಮರ ಹತ್ತುವವರು ತಮ್ಮ ಕೆಲಸದ ಕತ್ತಿ (ಮಚ್ಚು)ಯನ್ನು ಸೊಂಟದ ಕೊಕ್ಕೆಗೆ ಸಿಕ್ಕಿಸಿಕೊಳ್ಳುತ್ತಾರೆ. ಕತ್ತಿಯ ಕೆಲಸ ಇಲ್ಲದಿದ್ದಾಗ ಕೈಗಳಲ್ಲಿ ಹಿಡಿದುಕೊಳ್ಳುವ ಪ್ರಮೇಯ ಇಲ್ಲ. ಮರೆತು ತೋಟದಲ್ಲಿ ಬಿಡುವುದಿಲ್ಲ. ಬಿಗಿದುಕೊಳ್ಳುವ ಬಳ್ಳಿ ಸೊಂಟಕ್ಕೂ ಆಧಾರ. ಅಷ್ಟೇ ಅಲ್ಲಾ... ಈ ಸೊಂಟದ ಕೊಕ್ಕೆಯನ್ನೂ ಹಕ್ಕಿಯ ಚುಂಚು, ಹಾವಿನ ಹೆಡೆ ಇತ್ಯಾದಿ ರೂಪದಲ್ಲಿ ಕಲಾತ್ಮಕವಾಗಿ ಮಾಡಿಸಿಕೊಳ್ಳುತ್ತಾರೆ.

**-ಅನು ಬೊಮ್ನಳ್ಳಿ, ಶಿರಸಿ**

## ಕಲ್ಲು ಮಂಚ

ಚಿತ್ರದುರ್ಗದಿಂದ ಶಿವಮೊಗ್ಗ ರಸ್ತೆಯಲ್ಲಿ ಸುಮಾರು ಎರಡು ಕಿ.ಮೀ. ದೂರ ಪ್ರಯಾಣಿಸಿದರೆ ಸಿಗುವುದೇ 'ಹೆಂಡೆ ಗದ್ದೆ' ಎಂಬ ಸ್ಥಳ. ಅಲ್ಲಿರುವ ಎರಡು ಪುರಾತನ ಕಲ್ಲಿನ ಕಟ್ಟಡದ ಕೊಳಗಳ ದಂಡೆಯ ಮೇಲೆ ಪಾಂಡವರ ಕಾಲದ್ದೆಂದು ಹೇಳುವ ಸುಂದರ ಕೆತ್ತನೆಯ ಕಲ್ಲು ಮಂಚವಿದೆ. ಇದು ಪ್ರಾಚೀನ ಶಿಲ್ಪಿಗಳ ಕಲಾ ಚತುರತೆಯನ್ನು ಸಾರುತ್ತಿದೆ.

**-ಎಸ್.ಎಚ್. ಜೋಯಿಸ್,**
**ಚಿತ್ರದುರ್ಗ**

